MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 | ENGLISH DAILY | Subscription Yearly - Rs. - | FRIDAY | 17-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪೋಶಕಾಂಶ ಮತ್ತು ವಿಟಮಿನ್ ವರ್ಧಿತ ಅಕ್ಕಿ ಉತ್ಪಾದನಾ ಘಟಕ ಸ್ಥಾಪಿಸಲು ಕೇಂದ್ರ ಸರಕಾರ ಕೇಳಿಕೆ

2024 ರೊಳಗೆ ಕೇಂದ್ರ ಸರಕಾರ 37.5 ಮಿಲಿಯನ್ ಟನ್ ಗಳಷ್ಟು ಪೋಶಕಾಂಶ ಹಾಗೂ ವಿಟಮಿನ್ ವರ್ಧಿತ ಅಕ್ಕಿಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪೌಷ್ಠಿಕಾಂಶದ ಕೊರತೆ ಹೊಂದಿರುವ ಬಡಜನರಿಗೆ ವಿತರಿಸಲು ಯೋಜಿಸಿದ್ದು, ಅದರಂತೆ ಭತ್ತ ಖರೀದಿ ಕೇಂದ್ರಗಳ ಹತ್ತಿರ ಪೋಶಕಾಂಶ ಹಾಗೂ ವಿಟಮನ್ ವರ್ಧಿತ ಅಕ್ಕಿ ಉತ್ಪಾದನಾ ಸೌಲಭ್ಯವನ್ನು ಹೊಂದಲು ಮಿಲ್ ಗಳಿಗೆ ಕೇಳಿಕೊಳ್ಳಲಾಗುತ್ತಿದೆ. ಪೋಷಕಾಂಶಗಳ ಕೊರತೆಯನ್ನು ಹೊಂದಿರುವ ವರ್ಗದ ಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ಪೋಷಕಾಂಶ ಮತ್ತು ವಿಟಮನ್ ವರ್ಧಿತ ಅಕ್ಕಿ ವಿತರಿಸಲು ಯೋಜಿಸಲಾಗಿದೆಯೆನ್ನಲಾಗಿದೆ.

## ಬೇಳೆಕಾಳು ಸಗಟು ದರಗಳು ಹಿಂದಿನ 6 ತಿಂಗಳಲ್ಲಿ ಇಳಿಕೆ

ಹಿಂದಿನ ಆರು ತಿಂಗಳಲ್ಲಿ ಬೇಳೆಕಾಳು ದರಗಳು ಸರಕಾರದ ವಿವಿಧ ನೀತಿಗಳಿಂದಾಗಿ ಇಳಿಕೆ ಕಂಡಿವೆಯೆನ್ನಲಾಗಿದೆ. ಆಮದು ಸರಕಾರಿ ಏಜೆನ್ಸಿಗಳ ಮೂಲಕ ಪೂರೈಕೆ ಇವುಗಳಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಕಡಿಮೆ ದರದ ಆಮದಿನಿಂದ ದೇಶೀ ಬೇಳೆಕಾಳು ದರ ಇಳಿಕೆಯಾಗಿದೆಯೆನ್ನಲಾಗಿದೆ. ಮುಂದಿನ ತಿಂಗಳಿಂದ ರಾಬಿ ಬೆಳೆಯ ಬೆಳೆಯ ಬೇಳೆಕಾಳು ಮಾರುಕಟ್ಟೆಗೆ ಆವಕವಾಗುವ ಸಂಭವವಿದ್ದು ದರದ ಮೇಲೆ ಒತ್ತಡ ಬೀಳುವ ಸಾಧ್ಯತೆಯಿದೆ.